ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ

ದಿನಾಂಕ : DATE : 12/07/2019

**ಕರ್-ನಾಟಕ** 'ನ ಭೂತೋ ನ ಭವಿಷ್ಯತಿ' ಎಂಬಂಥ ವಿದ್ಯಮಾನಕ್ಕೆ ಸಾಕ್ಷಿಯಾಯಿತು ರಾಜ್ಯದ ಶಕ್ತಿಕೇಂದ್ರ

# ವಿಧಾನಸೌಧದಲ್ಲಿ ಮತ್ತೆ ಹೈಡ್ರಾಮಾ!

**ವಿಶೇಷ ವಿಮಾನದಲ್ಲಿ ಅತೃಪ್ತರ ಆಗಮನ | ಝೀರೋ ಟ್ರಾಫಿಕ್ಕಲ್ಲಿ ವಿಧಾನಸೌಧಕ್ಕೆ | ಭದ್ರತೆ ನಡುವೆ ಸ್ಪೀಕರ್ ಭೇಟಿ**

12/7/19

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕರ್ನಾಟಕದ ಶಕ್ತಿಕೇಂದ್ರ ವಿಧಾನಸೌಧದ ಇತಿಹಾಸದಲ್ಲಿ 'ನ ಭೂತೋ ನ ಭವಿಷ್ಯತಿ' ಎಂಬಂತೆ ಪೊಲೀಸ್ ಬಿಗಿ ಸರ್ಪಗಾವಲಿನಲ್ಲಿ ವಿಧಾನಸಭೆ ಸಭಾಧ್ಯಕ್ಷ ಕೆ.ಆರ್. ರಮೇಶ್‌ಕುಮಾರ್ ಅವರ ಕಚೇರಿಗೆ ಆಗಮಿಸಿದ ಅತೃಪ್ತ ಶಾಸಕರು ಕೆಲವೇ ಕ್ಷಣಗಳಲ್ಲಿ ರಾಜೀನಾಮೆ ಸಲ್ಲಿಕೆ ಹಾಗೂ ವಿವರಣೆ ನೀಡುವ ಪ್ರಕ್ರಿಯೆ ಮುಗಿಸಿ ಆತುರದಿಂದ ವಾಪಸ್ಸಾಗಿದ್ದಾರೆ. ಬುಧವಾರ ಚಿಕ್ಕಬಳ್ಳಾಪುರ ಶಾಸಕ ಡಾ.ಕೆ. ಸುಧಾಕರ್ ಮೇಲೆ ಕಾಂಗ್ರೆಸ್ ನಾಯಕರ ಮುತ್ತಿಗೆ ಪರಿಣಾಮ ಮಧ್ಯ ಪ್ರವೇಶ ಮಾಡಿದ್ದ ರಾಜ್ಯಪಾಲ ವಿ.ಆರ್. ವಾಲಾ ಅವರು ಹಾಗೂ ಶಾಸಕರ ಮನವಿ ಮೇರೆಗೆ ಸುಪ್ರೀಂಕೋರ್ಟ್ ಶಾಸಕರಿಗೆ ಸೂಕ್ತ ಭದ್ರತೆ ಕಲ್ಪಿಸುವಂತೆ ಆದೇಶಿಸಿತ್ತು. ↘ 10



ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ವಿಧಾನಸೌಧಕ್ಕೆ ಆಗಮಿಸಿ, ಸ್ಪೀಕರ್ ಭೇಟಿ ಬಳಿಕ ನಿರ್ಗಮಿಸಿದ ಅತೃಪ್ತ ಶಾಸಕರು.

## ಏನೇನಾಯ್ತು?

1. ವಿಶೇಷ ವಿಮಾನದಲ್ಲಿ ಸಂಜೆ 5.30ಕ್ಕೆ ಬೆಂಗಳೂರಿನ ಎಚ್‌ಎಎಲ್ ಏರ್‌ಪೋರ್ಟ್‌ಗೆ 9 ಅತೃಪ್ತ ಶಾಸಕರ ಆಗಮನ
2. ಅವರನ್ನು ಕೂಡಿಕೊಂಡ ಮತ್ತಿಬ್ಬರು ಅತೃಪ್ತರು. ಝೀರೋ ಟ್ರಾಫಿಕ್ ವ್ಯವಸ್ಥೆಯಡಿ ವಿಧಾನಸೌಧದತ್ತ ದೌಡು
3. ಸ್ಪೀಕರ್ ಭೇಟಿಗೆ ನಿಗದಿಯಾಗಿದ್ದ 6 ಗಂಟೆ ಸಮೀಪಿಸುತ್ತಿದ್ದಂತೆ ಅತೃಪ್ತರಿಗೆ ಆತಂಕ. 6.03ಕ್ಕೆ ವಿಧಾನಸೌಧ ಪ್ರವೇಶ
4. ಓಡೋಡಿ ವಿಧಾನಸೌಧ ಪ್ರವೇಶಿಸಿ, ಸ್ಪೀಕರ್ ಕಚೇರಿಯತ್ತ ದೌಡಾಯಿಸಿದ ಅತೃಪ್ತ ಶಾಸಕರು. ಸ್ಪೀಕರ್ ಭೇಟಿ
5. ಇಡೀ ಪ್ರಕ್ರಿಯೆ ವಿಡಿಯೋ ಚಿತ್ರೀಕರಿಸಿದ ಪೊಲೀಸರು. ವಿಧಾನಸೌಧಕ್ಕೆ 500 ಪೊಲೀಸ್ ಸಿಬ್ಬಂದಿಯ ಬಿಗಿ ಭದ್ರತೆ
6. ಸ್ಪೀಕರ್ ಕಚೇರಿಯಲ್ಲೂ ಪ್ರಕ್ರಿಯೆಯ ವಿಡಿಯೋ ಚಿತ್ರೀಕರಣ. ಅನ್ಯರಿಗೆ ಪ್ರವೇಶವಿಲ್ಲದೆ ಭದ್ರಕೋಟೆ ಆಗಿದ್ದ ಸೌಧ

# ವಿಧಾನಸೌಧದಲ್ಲಿ ಮತ್ತೆ ಹೈಡ್ರಾಮಾ!

↙ ಮೊದಲ ಪುಟದಿಂದ 12/7/19

ಈ ಹಿನ್ನೆಲೆಯಲ್ಲಿ ವಿಧಾನಸೌಧ ಆವರಣ ಹಾಗೂ ಸುತ್ತಲೂ ನಿಷೇಧಾಜ್ಞೆ ಜಾರಿಗೊಳಿಸಿದ ಪೊಲೀಸ್ ಆಯುಕ್ತರು ಬಿಗಿ ಭದ್ರತೆಗೆ ಕ್ರಮ ಕೈಗೊಂಡಿದ್ದರು. 500ಕ್ಕೂ ಹೆಚ್ಚು ಮಂದಿ ಪೊಲೀಸರಿಂದ ಖಾಕಿ ಭದ್ರಕೋಟೆ ನಿರ್ಮಿಸಿ, ಸಾರ್ವಜನಿಕರು ಹಾಗೂ ಅನ್ಯ ಇಲಾಖೆ, ಜಿಲ್ಲೆಗಳ ಸರ್ಕಾರಿ ಅಧಿಕಾರಿಗಳಿಗೂ ವಿಧಾನಸೌಧದ ಪ್ರವೇಶ ನಿರ್ಬಂಧಿಸಲಾಗಿತ್ತು. ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ತಹಸೀಲ್ದಾರ್ ಸೇರಿದಂತೆ ಹಿರಿಯ ಅಧಿಕಾರಿಗಳೇ ಬಂದ ದಾರಿಗೆ ಸುಂಕವಿಲ್ಲದಂತೆ ವಾಪಸಾದರು.

ಸಂಜೆ 5.30ರ ವೇಳೆಗೆ ವಿಶೇಷ ವಿಮಾನದಲ್ಲಿ ನಗರದ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಬಂದಿಳಿದ 9 ಶಾಸಕರು, ನಗರದಲ್ಲೇ ಅವರನ್ನು ಕೂಡಿಕೊಂಡ ಇಬ್ಬರು ಸೇರಿ ಹನ್ನೊಂದು ಮಂದಿ ಎಚ್‌ಎಎಲ್‌ನಿಂದ ವಿಧಾನಸೌಧದವರೆಗೆ ಜೀರೋ ಟ್ರಾಫಿಕ್ ವ್ಯವಸ್ಥೆಯಲ್ಲಿ ಆಗಮಿಸಿದರು. 5 ಸುತ್ತಿನಲ್ಲಿ ಕಲ್ಪಿಸಿದ್ದ ಬಿಗಿ ಭದ್ರತೆಯಲ್ಲಿ ಸಂಜೆ 6 ಗಂಟೆಗೆ ಬಂದ ಶಾಸಕರನ್ನು ಸ್ಪೀಕರ್ ಕಚೇರಿಗೆ ಕರೆದೊಯ್ಯಲಾಯಿತು. ಶಾಸಕರು ವಿಧಾನಸೌಧ ಆವರಣದಲ್ಲಿ ಬಸ್ಸು ಇಳಿಯುವುದರಿಂದ ಹಿಡಿದು ಸ್ಪೀಕರ್ ಕಚೇರಿಗೆ ಪ್ರವೇಶಿಸುವವರೆಗೆ, ಸ್ಪೀಕರ್ ಕಚೇರಿಯಿಂದ ಹೊರಟು ಮತ್ತೆ ಬಸ್ಸು ಹತ್ತಿ ವಾಪಸ್ಸಾಗುವವರೆಗೆ ಶಾಸಕರ ಇಡೀ ಚಲನವಲನ ಹಾಗೂ ಶಾಸಕರಿಗೆ ಕಲ್ಪಿಸಿದ್ದ ಭದ್ರತೆಯನ್ನು ವಿಡಿಯೋ ರೆಕಾರ್ಡ್ ಮಾಡಲಾಯಿತು. ಸ್ಪೀಕರ್ ಕಚೇರಿಯಲ್ಲಿ 1 ಗಂಟೆ ಪ್ರಕ್ರಿಯೆ ನಡೆದಿದ್ದು, ಇಡೀ ಪ್ರಕ್ರಿಯೆಯನ್ನು ಪ್ರತ್ಯೇಕವಾಗಿ ವಿಡಿಯೋ ಚಿತ್ರೀಕರಣ ಮಾಡಲಾಯಿತು.

ಸ್ಪೀಕರ್ ಕಚೇರಿಯಿಂದ ಹೊರ ಬಂದ ಮೇಲೂ ಬಿಗಿ ಭದ್ರತೆಯಲ್ಲಿ ವೇಗವಾಗಿ ಭದ್ರತಾ ಸಿಬ್ಬಂದಿ ಶಾಸಕರನ್ನು ಕರೆದೊಯ್ದರು. ಸುದ್ದಿ ಮಾಧ್ಯಮದವರಿಗೆ ಮಾತನಾಡಲು ಮುಂದಾದ ಬಿ.ಸಿ. ಪಾಟೀಲ್ ಅವರನ್ನು ಪೊಲೀಸರೇ ಬಲವಂತವಾಗಿ ಕರೆದೊಯ್ದರು.

**ವಿಧಾನಸೌಧ ಸಂಪೂರ್ಣ ಬಂದ್:** ವಿಧಾನಸೌಧದ ಆರು ದ್ವಾರಗಳಲ್ಲಿ ಶಾಸಕರ ಭವನ ಹಾಗೂ ಬಹುಮಹಡಿ ಕಟ್ಟಡಗಳಿಂದ ಆಗಮಿಸಲಿದ್ದ ದ್ವಾರಗಳಿಗೆ ಬೀಗ ಜಡಿಯಲಾಗಿತ್ತು. ವಿವಿಧ ಅಹವಾಲುಗಳನ್ನು ಹೊತ್ತು ವಿಧಾನಸೌಧಕ್ಕೆ ರಾಜ್ಯದ ಮೂಲೆಮೂಲೆಗಳಿಂದ ಆಗಮಿಸಿದ್ದ ಸಾರ್ವಜನಿಕರು, ಸರ್ಕಾರಿ ಅಧಿಕಾರಿಗಳಿಗೆ ವಿಧಾನಸೌಧ ಸಂಪೂರ್ಣ ಬಂದ್ ಆಗಿತ್ತು. ಸಾರ್ವಜನಿಕರ ಅರ್ಜಿಗಳನ್ನು ಪೂರ್ವ ದ್ವಾರದಲ್ಲಿದ್ದ ಟಪಾಲಿನಲ್ಲೇ ಸ್ವೀಕರಿಸಿ ಸ್ವೀಕೃತಿ ನೀಡಿ ಕಳುಹಿಸಲಾಯಿತು.

ಸ್ಪೀಕರ್ ಕಚೇರಿ ಇರುವ ಮೊದಲ ಮಹಡಿಯಲ್ಲಿ ಪಶ್ಚಿಮ ಭಾಗದ ಎಲ್ಲಾ ಕಚೇರಿಗಳಿಗೂ ಬೀಗ ಜಡಿಯಲಾಯಿತು. ಈ ಭಾಗದಲ್ಲಿ ಯಾವುದೇ ಅಧಿಕಾರಿಗಳೂ ಸಹ ಓಡಾಡಲು ಅವಕಾಶ ನೀಡದೆ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.